ನೆರವಿನ ಜಲಶಾಸ್ತ್ರ ಯೋಜನೆಯಡಿಯಲ್ಲಿ ಜಿ.ಡಬ್ಲ್ಯೂ.ಡಿ.ಇ.ಎಸ್. ಸಾಫ್ಟ್‌ವೇರ್‌ಗಳನ್ನು ಅಳವಡಿಸಲಾಗಿದೆ. ಕೇಂದ್ರ ಕಛೇರಿಯ ಈ-ಮೈಲ್ ವಿಳಾಸವು ಈ ಕೆಳಕಂಡಂತಿದೆ.

ಶಿವಮೊಗ್ಗ	geosmg@satyam.net.in
ತುಮಕೂರು	geotmk@bsnl.net.in
ದಕ್ಷಿಣ ಕನ್ನಡ	geomng@bsnl.net.in
ಬೆಂಗಳೂರು	nhari@blr.vsnl.net.in

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಛೇರಿಗಳೊಂದಿಗೆ ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ಕಛೇರಿಗಳು ಲೋಕಲ್ ಏರಿಯಾ ನೆಟ್‌ವರ್ಕ್ ಮೂಲಕ ಸಂಪರ್ಕ ಹೊಂದಿರುವುದಿಲ್ಲ.

ಸಣ್ಣ ಕೈಗಾರಿಕಾ ಮಂತ್ರಿಗಳು ಮತ್ತು ಇಲಾಖಾ ಕಾರ್ಯದರ್ಶಿಗಳ ಕಛೇರಿ ಗಣಕೀಕರಣ

2690 (3543) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ನೀತಿಯಾಗಿದ್ದು; ಸಣ್ಣ ಕೈಗಾರಿಕಾ ಇಲಾಖಾ ಮಂತ್ರಿಗಳ ಮತ್ತು ಇಲಾಖಾ ಕಾರ್ಯದರ್ಶಿಗಳ ಕಛೇರಿಗಳನ್ನು ಗಣಕೀಕರಣಗೊಳಿಸಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಈ ಬಗ್ಗೆ ಸರಕಾರ ತೆಗೆದುಕೊಂಡ ಮತ್ತು ತೆಗೆದುಕೊಳ್ಳುವ ಕ್ರಮಗಳ ವಿವರಗಳೊಂದಿಗೆ ಮಂತ್ರಿಗಳ ಹಾಗೂ ಇಲಾಖಾ ಕಾರ್ಯದರ್ಶಿಗಳ ಈಮೆಲ್ ವಿಳಾಸವನ್ನು ಒದಗಿಸುವುದು

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಸಣ್ಣ ಕೈಗಾರಿಕಾ ಮಂತ್ರಿಗಳ ಕಛೇರಿಯನ್ನು ಗಣಕೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಲಾಖಾ ಕಾರ್ಯದರ್ಶಿಗಳಿಗೆ ಈಗಾಗಲೇ ಈ ಮೇಲೆ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

ಸಣ್ಣ ಕೈಗಾರಿಕಾ ಸಚಿವರ ಕಚೇರಿಯನ್ನು ಇನ್ನೂ ಗಣಕೀಕೃತಗೊಳಿಸಿರುವುದಿಲ್ಲ-ವಾದ್ದರಿಂದ ಇನ್ನೂ ಈಮೈಲ್ ಸೌಲಭ್ಯ ಒದಗಿಸಿರುವುದಿಲ್ಲ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಗಳ ಈ-ಮೈಲ್ ವಿಳಾಸ.

``secyin@secretariat2.kar.nic.in"